# ಎಳ್ಳಮಾಸಿ ಭಜ್ಜಿ ಕಡಬು

‘ಓಲ್ಗೋ ಓಲ್ಗೋ ಚಲ್ಲಂ ಪೋಲ್ಗೋ’ ಹೀಗೆ ಹಾದಿ ಬೀದಿಯಲ್ಲಿ ರೈತಾಪಿ ಹುಡುಗರು ಘೋಷಣೆ ಹಾಕುತ್ತ ಹೊರಟರೆಂದರೆ ಉತ್ತರ ಕರ್ನಾಟಕದಲ್ಲಿ ಎಳ್ಳಾಮಾಸೆ ಕಾಲಿಟ್ಟಿದೆ ಎಂದೇ ಅರ್ಥ. ಹೊಸ್ತಿಲ ಹುಣ್ಣಿಮೆಯಾದ ನಂತರ ಬರುವ ಈ ಅಮವಾಸಿಯು (ಅಮಾವಾಸ್ಯೆ) ಕಲ್ಯಾಣ ಕರ್ನಾಟಕದಲ್ಲಿ ವಿಶೇಷವಾಗಿ ಆಚರಿಸಲ್ಪಡುತ್ತದೆ. ರೈತಾಪಿಗಳು ಭೂಮಿಯನ್ನು ಪೂಜಿಸಿ ಬೆಳೆಯು ಸಮೃದ್ಧವಾಗಿ ಬರಲಿ ಎಂದು ಹಾರೈಸುವ ಹಬ್ಬವಿದು. ಕಲ್ಯಾಣ ಕರ್ನಾಟಕವು ಕಪ್ಪುಮಣ್ಣು ಮತ್ತು ಸೊಕ್ಕಿದ ಸೂರ್ಯನ ನಾಡು. ಮುಂಗಾರಿನ ಪೀಕಿನಲ್ಲಿ ಉದ್ದು, ಹೆಸರು, ಮಟಕಿ ಮುಂತಾಗಿ ದ್ವಿದಳ ಧಾನ್ಯಗಳನ್ನು ಅಲ್ಪಾವಧಿಯಲ್ಲಿ ಬೆಳೆದು ಒಂದಷ್ಟು ರೊಕ್ಕ ಮಾಡಿಕೊಂಡರೆ ಹಿಂಗಾರನ್ನು ಜೋಳ, ತೊಗರಿ, ಕಡಲೆ, ಗೋಧಿ ಇತ್ಯಾದಿ ಧಾನ್ಯಗಳಿಗೆ ಮೀಸಲಿಡಲಾಗುತ್ತದೆ. ಜೋಳವನ್ನು ಬಿತ್ತಲೆಂದೆ ರೈತರು ಮುಖ್ಯವಾದ ಜಮೀನನ್ನು ಕಾಯ್ದಿಟ್ಟುಕೊಂಡಿರುತ್ತಾರೆ. ಜೋಳದ ಹೊಲವೆಂದರೆ ಕಪ್ಪನೆ ಎರೆಭೂಮಿ. ಒಂದೆರಡು ಸಾಧಾರಣ ಮಳೆಯಾದರೂ ಸಾಕು, ಮುತ್ತಿನಂಥ ಜೋಳ ಭರ್ತಿ ಮನೆ ತುಂಬುವ ಹಂಗಾಮು. ಖರಿಫ್ (ಮುಂಗಾರು) ಬಿತ್ತಿದ ಹೊಲ ಎಂಜಲು ಭೂಮಿ ಎನಿಸಿಕೊಂಡರೆ ರಬ್ಬೀಗಾಗಿ (ಹಿಂಗಾರು) ಮೀಸಲಿಟ್ಟ ನೆಲವು ಕನ್ನೆ ನೆಲವೆನಿಸಿಕೊಳ್ಳುತ್ತದೆ. ಅಂದರೆ ಮೀಸಲು ಬೀಸರವೋಗದ ಶುಭ್ರನೆಲವೆಂದು ಕರೆಸಿಕೊಳ್ಳುತ್ತದೆ. ಇಲ್ಲಿನವರ ಪ್ರಧಾನ ಆಹಾರ ಜೋಳದ ರೊಟ್ಟಿಯಾದ್ದರಿಂದ ಜೋಳ ಬಿತ್ತಿಸಿಕೊಳ್ಳುವ ನೆಲಕ್ಕೆ ವಿಶೇಷ ಪ್ರಾಧಾನ್ಯ.

ಎಳ್ಳಮಾಸಿಗೆ ಜೋಳದ ಹೊಲದ ಪೂಜೆ ಅಗ್ದೀ ಪ್ರಶಸ್ತವಾಗಿ ಸಾಂಗಗೊಳ್ಳುತ್ತದೆ. ಅಮವಾಸಿ ಹಿಂದಿನ ದಿನ ಕಾಯಿಪಲ್ಯೆ ಸೋಸುವ ದಿನ. ಪ್ರಧಾನ ಮಳೆಗಳೆಲ್ಲ ಮುಗಿದು ಬಿತ್ತಿದ ಜೋಳ, ಕಡಲೆ, ತೊಗರಿ ಇತ್ಯಾದಿ ದಾಣೆಗಳ ನಡುವೆ ಬಿತ್ತಿದ ಪುಂಡಿ, ಅಗಸಿ, ಹಸಿರ್ಗಾಯಿ ಎಲ್ಲವೂ ಹುಲುಸಾಗಿ ಬೆಳೆದು ನಿಂತಿರುತ್ತವೆ. ದ್ವಿದಳ ಧಾನ್ಯಗಳಂತೂ ತಾಜಾ ಮನೆ ಸೇರಿರುತ್ತವೆ. ಈ ಅವಧಿಯಲ್ಲಿ ಎಲ್ಲ ಬಗೆಯ ತರಕಾರಿ ಅಂದರೆ ಮೆಂತ್ಯೆ, ಪಾಲಕ್, ಹುಳಿಚಿಕ್ಕಿ, ಸೊಬಸಿ, ರಾಜಗಿರಿ, ಹಸಿ ಉಳ್ಳಾಗಡ್ಡಿ ಹೀಗೆ ಹೆಸರಿಸಲಾಗದಷ್ಟು ಪಲ್ಯೆ ಕೈ ಚಾಚಿದಷ್ಟು ದಕ್ಕುವಂತಿರುತ್ತವೆ. ಈ ಕಾಲದಲ್ಲಿ ಲಭ್ಯವಾಗಿರುವ ಎಲ್ಲ ಪಲ್ಯೆ, ಕಾಯಿಗಳಾದ ಕುಂಬಳಕಾಯಿ, ಸೋರೆಕಾಯಿ, ಹಸಿಹುಣಸೆ, ಬದನೆ, ಹೀರೆ ಹೀಗೆ ಎಲ್ಲವನ್ನು ಹೊಲದಿಂದ ಇಲ್ಲವೆ ಬಜಾರಿನಿಂದ ತಂದು ಸ್ವಚ್ಛವಾಗಿಸುವುದು ಬಹಳ ಮುಖ್ಯ. ನಮ್ಮ ನಾಡಿನ ಮಂದಿ ಕಾಯಿಪಲ್ಯೆ ಸೋಸುವ ಈ ದಿನವನ್ನು ಭಾರಿ ಸಡಗರದಿಂದ ಬರಮಾಡಿಕೊಳ್ಳುವರಲ್ಲದೆ, ಹೊಲವಿದ್ದ ರೈತಾಪಿಗಳು ಹೊಲವಿಲ್ಲದವರನ್ನು ಕಡಬು ಭಜ್ಜಿ ಉಣಲೆಂದು ಮುನ್ನಾದಿನವೇ ಆಮಂತ್ರಣ ನೀಡಿರುತ್ತಾರೆ. ಹಗಲೆಲ್ಲ ಕಾಯಿಪಲ್ಯೆ, ಕಾಳು, ಕಡಿ ಸೋಸಿ ತಯಾರು ಮಾಡಿಕೊಂಡರೆ, ರಾತ್ರಿಯಿಡೀ ಭಜ್ಜಿ, ಕಡಬು, ಹಿಂಡಿಪಲ್ಯೆ, ಭರ್ತ, ಅಂಬಲಿ, ಹೋಳಿಗೆ ತಯಾರಿಸುವ ಸಂಭ್ರಮ. ಈ ಅವಧಿಯಲ್ಲಿ ಸಿಗುವ ಎಲ್ಲ ಪಲ್ಯೆ, ಹಸಿಕಡಲೆ, ಹಸಿತೊಗರಿ, ಹಸಿಮೆಣಸಿನಕಾಯಿ, ಹಸಿಹುಣಿಸಿ ಮೇಲೆ ಭರ್ತಿ ಬೆಳ್ಳುಳ್ಳಿ, ಕೊತ್ತಂಬರಿ, ಕರಿಬೇವು ಹಾಕಿ ಮಾಡುವ ವಿಶಿಷ್ಟ ಖಾದ್ಯವೇ ಭಜ್ಜಿ. ಇದರೊಂದಿಗೆ ಜೋಳ, ಸಜ್ಜೆ ಹಿಟ್ಟಿನಿಂದ ಮಾಡುವ ಗುಂಡು ಗೋಲಿಯಂಥ ಕಡಬು, ಹೆಸರುಕಡಲೆ, ಶೇಂಗಾದಿಂದ ತಯಾರಿಸುವ ಹಿಂಡಿ ಪಲ್ಯೆ ಹಾಗೂ ಬದನೆಕಾಯಿ ಭರ್ತ ತಯಾರಿಸಿ ಎಲ್ಲವನ್ನು ಬಿದಿರಿನ ಬುಟ್ಟಿಗಳಲ್ಲಿ ತುಂಬಿಕೊಂಡು ನಸುಕಿನಲ್ಲಿ ಎತ್ತಿನ ಗಾಡಿ ಕಟ್ಟಿಕೊಂಡು ಹೊರಟರೆ ಅದನ್ನು ನೋಡುವ ಸೊಬಗು ಬೇರೆಯದೆ. ಅದರೊಟ್ಟಿಗೆ ಮೂರ ಬಟ್ಟ ಇಬತ್ತಿ (ವಿಭೂತಿ) ಕುಂಕುಮ ಹಚಗೊಂಡು ವಯ್ಯಾರದಿಂದ ಹೊಲದೊಡತಿಯ ತಲೆ ಮೇಲೆ ಕುಳಿತ ಅಂಬಲಿ ಗಡಿಗೆಯ ಟಬರು, ಹೊತ್ತುಕೊಂಡವಳಿಗಿಂತ ಜೋರಾಗಿರುತ್ತದೆ. ಬೇಗ ಹೊಲಕ್ಕೆ ಹೋಗಿ ಚರಗ ಚೆಲ್ಲಬೇಕು ಎಂಬ ಉಮೇದಿನಲ್ಲಿ ಎಲ್ಲರ ಮನೆಯ ಬಂಡಿಗಳು ಪೈಪೋಟಿಗಿಳಿದಂತೆ ಗಡಗಡಗಡಗಡ ಶಬ್ದ ಮಾಡುತ್ತ ಎತ್ತಿನ ಕೊರಳಿನ ಗೆಜ್ಜೆಗಳ ಕಿಂಕಿಣಿ ನಾದದಲ್ಲಿ ಬಯಲೆಂಬ ಬಯಲು ಎಳ್ಳಮಾಸಿ ಗತ್ತಿನಲ್ಲಿ ಮಸ್ತ ಮದಹೋಷ್‌ನಲ್ಲಿ ತುಯ್ದಾಡುತ್ತಿರುತ್ತದೆ.

ಹೊಲಕ್ಕೆ ಬಂದವರೆ ಐದು ಪುಟ್ಟ ಕಲ್ಲುಗಳನ್ನು ಆರಿಸಿಕೊಂಡು ಅವುಗಳನ್ನೆ ಪಾಂಡವರೆಂದು ಸಾಲಾಗಿಟ್ಟು ಪೂಜೆ ಮಾಡಿ ಅದರೊಟ್ಟಿಗೆ ಹೊಡೆ ಹಾಯ್ದಿರುವ ಜೋಳದ ದಂಟುಗಳಿಗೂ ಪೂಜೆ ಮಾಡಿ ನಂತರ ಜೋಳದ ಹಿಟ್ಟು, ಬೆಳ್ಳುಳ್ಳಿ, ಜೀರಗಿ, ಮಜ್ಜಿಗೆ ಹಾಕಿ ಕುದಿಸಿ ಮಾಡಿದ ಅಂಬಲಿಯನ್ನು ಜೋಳದ ಹೊಲದ ತುಂಬ ಸಿಂಪಡಿಸುತ್ತಾರೆ. ಇದಕ್ಕೆ ಚರಗ ಚೆಲ್ಲುವುದು ಎನ್ನುತ್ತಾರೆ. ಎಲ್ಲ ಭಕ್ಷ್ಯ ಭೋಜ್ಯಾದಿಗಳನ್ನು ಎಡೆ ಹಿಡಿದು ಓಲ್ಗೇ ಓಲ್ಗೆ ಚಲ್ಲಂ ಪೋಲ್ಗೊ ಎಂದು ರೈತರು ಜೋರಾಗಿ ಬಾಯಿ ಮಾಡುತ್ತ ಹೊಲದ ಸುತ್ತು ಹಾಕುತ್ತಾರೆ. ಭೂಮ್ತಾಯಿ ನಮಗಾಗಿ ಏನೆಲ್ಲ ಬೆಳೆದು ಕೊಡುತ್ತಾಳೆ. ಒಂದಿನವಾದರೂ ಅವಳಿಗೂ ಊಟ ಮಾಡಿಸಬೇಕಲ್ಲ ಎಂದು, ಎಳ್ಳಮಾಸಿ ದಿವಸ ಭೂಮ್ತಾಯಿಗೆ ಊಟ ಮಾಡಿಸಿದ ನಂತರ ಉಳಿದವರೆಲ್ಲ ಭಜ್ಜಿ, ಕಡಬು ಸಮಾರಾಧನೆಗೆ ಮುಂದಾಗುತ್ತಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರು ಅಂದು ಯಾರಾದರೊಬ್ಬರ ಹೊಲಕ್ಕೆ ಹೋಗಿ ಊಟ ಮಾಡುತ್ತಾರೆ. ವರ್ಷಕ್ಕೊಂದಾವರ್ತಿ ಸಿಗುವ ಬಾಯಿಗೆ ನೀರೂರಿಸುವ ಈ ಭಜ್ಜಿ, ಕಡಬಿನ ಸ್ವಾದದಿಂದ ವಂಚಿತರಾಗಲು ಬಯಸುವುದಿಲ್ಲ. ದಕ್ಷಿಣ ಕರ್ನಾಟಕದ ಮಂದಿಗೆ ಉಣಲು ಸಾಧ್ಯವೆ ಇಲ್ಲದಂಥ ಭರ್ತಿ ಖಾರಭರಿತ ಈ ಮೇಲೋಗರದ ಮೇಲಿಷ್ಟು ಬೆಳ್ಳುಳ್ಳಿ, ಜೀರಗಿ ಹಾಕಿ ಕಾಯಿಸಿದ ಉಂಬಾಎಣ್ಣೆ ಹಾಕಿಕೊಂಡು ಉಂಡರೆ ಸ್ವಾದ ಬ್ರಹ್ಮಾಂಡಕ್ಕೇರಿ ಒಂದ ನಮೂನಿ ಸಾಕ್ಷಾತ್ಕಾರವಾಗದೆ ಇರದು. ಹಾದಿ ಬೀದಿಯಲ್ಲಿ ಹೋಗುವವರನ್ನು ಕರೆದು ಉಣಿಸುವುದು ಎಳ್ಳಮಾಸಿಯ ನೇಮ. ಜನರು ಉಂಡಷ್ಟು ತಮ್ಮ ಹೊಲ ಹುಲುಸಾಗಿ ಬೆಳೆಯುತ್ತದೆ, ಭೂಮ್ತಾಯಿ ಖುಷಿಯಾಗಿ ತಮ್ಮನ್ನು ಹರಸುತ್ತಾಳೆ ಎಂಬ ನಂಬಿಕೆ ರೈತರದು.

ಉಣ್ಣುವುದನ್ನು ತೀರ ತುಚ್ಛವಾಗಿ ಕಂಡು ಉಣ್ಣುವುದಕ್ಕಾಗಿಯೇ ಬದುಕಿದ್ದೀರೇನು? ಎಂದು ಹಳಿಯುವುದು ಮಾಮೂಲಿ ತಾನೆ? ಹೊಟ್ಟೆಯ ಹಸಿವನ್ನು ವಾಸನೆ, ಮಾಯೆ, ಲೋಕ ಜಂಜಡವೆಂದು ಜರಿದ ಜಡ ಆಧ್ಯಾತ್ಮವಾದಿಗಳಿಗೆ ಒಂದು ಸಲ ನಮ್ಮ ನಾಡಿನ ಎಳ್ಳಮಾಸಿಯ ಭಜ್ಜಿ, ಕಡಬು, ಅಂಬಲಿ ಉಣ್ಣಲು ಹೇಳಬೇಕು. ಉಣ್ಣುವುದು ಕೂಡ ಸಾಧನೆ. ಅದೂ ಒಂದು ಕಲೆ ಎಂದು ತೋರಿಸಿದವರು ನಮ್ಮ ನಾಡಿನ ರೈತರು. ಭಕ್ತಿಯಿಂದ ಉಣ್ಣಿಸುವುದರಲ್ಲಿ ಶಿವನನ್ನು ಮರಳು ಮಾಡಿದವರಲ್ಲವೆ? ಚರಗ ಚೆಲ್ಲುವ ಈ ಅಂಬಲಿ ಮಾಮೂಲಿ ಅಲ್ಲ. ಶರಣ ಮಾದಾರ ಚೆನ್ನಯ್ಯನು ಶಿವನಿಗೆ ಉಣಿಸಿ ಹುಚ್ಚು ಹಚ್ಚಿದ ಸಾರವದು. ಅಣ್ಣ ಬಸವಣ್ಣನವರು ‘ಹಾಲ ನೇಮ, ಹಾಲ ಕೆನೆಯ ನೇಮ/ ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ/ ಬೆಣ್ಣೆಯ ನೇಮ, ಬೆಲ್ಲದ ನೇಮ/ ಅಂಬಲಿಯ ನೇಮದವರಾರನೂ ಕಾಣೆ/ ಕೂಡಲಸಂಗನ ಶರಣರಲ್ಲಿ ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ’ ಎಂದಿರುವುದು ಸುಮ್ಮನಲ್ಲ.

ಕಲ್ಯಾಣ ಕರ್ನಾಟಕದಲ್ಲಿ ಎಳ್ಳಮಾಸಿಯ ಭಜ್ಜಿ, ಕಡಬು ಮತ್ತು ಅಂಬಲಿಗಳಿಗೆ ರೈತಾಪಿ ವರ್ಗದ ಕೊಡುಕೊಳ್ಳುವಿಕೆಯ ಸಾಂಸ್ಕೃತಿಕ ಮಹತ್ವ ಇದೆ.

■ **ಮೀನಾಕ್ಷಿ ಬಾಳಿ**

## ಮಾತೇ ಮುತ್ತು

- ರಾಜಕೀಯ ಕುರುಡರಿಗೆ ಕುರುಡರು ದಾರಿ ತೋರುವ ಒಂದು ಕಸುಬು.

—ಪಾಲ್ ಬೆಲೆರಿ

- ರಾಜ್ಯದ ವ್ಯವಹಾರಗಳನ್ನು ಕುರಿತು ‘ನನಗೇನು?’ ಎಂದು ಜನ ಹೇಳಲಾರಂಭಿಸಿದಾಗ ಆ ರಾಜ್ಯಕ್ಕೆ ಭವಿಷ್ಯವಿಲ್ಲ.

—ರೂಸೊ

- ರಾಜಕಾರಣದಲ್ಲಿ ವೈರಿ ಈ ಹೊತ್ತು, ನಾಳೆ ಏನಾಗುವನು? ಉಂಟೇನು ಗೊತ್ತು? ಕೈಲಿ ಸಿಕ್ಕಿದರೆ ಸಾಕಷ್ಟು ನೈವೇದ್ಯ, ಕಡುವೈರಿಯೂ ಗೆಳೆಯನಾಗುವುದು ಸಾಧ್ಯ.

—ದಿನಕರ ದೇಸಾಯಿ

- ಭಿನ್ನಮತದ ಮನ್ನಣೆಯೇ ಪ್ರಜಾಪ್ರಭುತ್ವದ ಪ್ರಾಣವಾಯು.

—ಗೋಪಾಲಕೃಷ್ಣ ಅಡಿಗ

- ಹೆಚ್ಚಿನ ರಾಜಕಾರಣಿಗಳಿಗೆ ಏನೂ ಗೊತ್ತಿರುವುದಿಲ್ಲ. ಆದರೆ, ಅವರು ತಮಗೆ ಎಲ್ಲವೂ ಗೊತ್ತಿರುವಂತೆ ಮಾತನಾಡುತ್ತಾರೆ.

—ಜಾರ್ಜ್ ಬರ್ನಾರ್ಡ್ ಶಾ